ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ,
ಆನೇಕಲ್

ಒ.ಎಸ್. ನಂಬರ್ : 134/2011

ಪಿ.ಡಬ್ಲ್ಯು : 2
ಪ್ರಮಾಣ ವಚನ ಬೋಧಿಸಲಾಯಿತು :
ದಿನಾಂಕ : 19.06.2019

**ಪಾಟೀ ಸವಾಲು : ಶ್ರೀ ವಿ.ಪಿ.ಎಸ್. ವಕೀಲರಿಂದ ಪ್ರತಿವಾದಿ ಪರ.**

ರೂಪಾಯಿ 7 ಮತ್ತು ರೂ. 3.5 ಮೌಲ್ಯದ ಛಾಪಾ ಕಾಗದದಲ್ಲಿ ವಾದಿಗೆ ಕರಾರು ಮಾಡಿಕೊಟ್ಟಿದ್ದಾರೆ. ನಿಪಿ 1 ಕರಾರು ಪತ್ರದಲ್ಲಿ ದಿನಾಂಕ 27.04.1989 ರೊಳಗೆ ಕ್ರಯಪತ್ರ ಬರೆದುಕೊಡಬೇಕು ಎಂದು ನಮೂದು ಆಗಿತ್ತು. ನಿಪಿ 1ರ ಕರಾರು ಪತ್ರ ಆದಾಗ ನಾನು ಹಾಜರಿರಲಿಲ್ಲ. ಆದುದರಿಂದ ನಿಪಿ 1ರ ಕ್ರಯದ ಕರಾರು ಪತ್ರ ಯಾವ ಸಂದರ್ಭದಲಿ ಯಾವ ಉದ್ದೇಶದಿಂದ ಮಾಡಿದರು ಎಂದು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸುವಾಗ ನಿಪಿ 1ರ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ವಕೀಲರಿಗೆ ಹೇಳಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ. ನಿಪಿ 2ರ ಕರಾರು ಪತ್ರದಲ್ಲಿ ಬಿಳಿ ಶಾಯಿ ಇಂದ ಕೆಲವು ವಿಚಾರಗಳನ್ನು ಹೊಡೆದು ಹಾಕಿರುವುದು ಕಂಡು ಬರುತ್ತದೆ ಎಂದರೆ ಸರಿ. ದಿನಾಂಕ 02.11.1989 ರಂದು ವಾದಿ ರೂ. 8 ಸಾವಿರ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಇರುವ ಷರಾ ಕ್ಕೆ ನನ್ನ ಸಹಿ ಇರುವುದಿಲ್ಲ. ಸದರಿ ನಿಪಿ 1ರ ಕರಾರಿನ ಅಡಿಯಲ್ಲಿ ಹಣ ಕೊಟ್ಟಾಗಲೂ ಕೂಡ ನಾನು ಹಾಜರು ಇರಲಿಲ್ಲ. ನಿಪಿ 2ರ ಕರಾರನ್ನು ರೂ. 100/- ಛಾಪಾ ಕಾಗದದಲ್ಲಿ ಬರೆದಿದ್ದಾರೆ. ಸದರಿ ಛಾಪಾ ಕಾಗದವನ್ನು ಪ್ರತಿವಾದಿ ರಾಮಮೂರ್ತಿ ತೆಗೆದುಕೊಂಡು ಬಂದರು. ಯಾವ ದಿನಾಂಕದಂದು ಖರೀದಿಸಿದರು ಎಂದು ಹೇಳಲಾಗುವುದಿಲ್ಲ. ನಾನು, ವಾದಿ ಮತ್ತು ವಾದಿ ಸಾಕ್ಷಿ ನಂ. 3ರವರು ಸೇರಿಕೊಂಡು ನಿಪಿ 2ರ ಕರಾರನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 1ರ ಕರಾರನ್ನು ಓದಿದ ನಂತರ ನಿಪಿ 2ರ ಸೆಟ್ಲಮೆಂಟ ಕರಾರನ್ನು ಮಾಡಿದ್ದೇವೆ. ನಿಪಿ 2ರ ಛಾಪಾ ಕಾಗದವನ್ನು ದಿನಾಂಕ 04.02.2010 ರಲ್ಲಿ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 09.02.2010 ರಂದು ಸದರಿ ಕರಾರನ್ನು ಬರೆದ ಬಗ್ಗೆ ನಮೂದಿಸಿದೆ ಎಂದರೆ ಸರಿ.

ನಿಪಿ 2 ರ ಕರಾರಿನಂತೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ 2 ರ ಕರಾರನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ರ ಕರಾರು ಪತ್ರವನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ರಾಮಮೂರ್ತಿ ತಯಾರು ಮಾಡಿ ತಂದಿದ್ದರು. ನಿಪಿ 2 ರಲ್ಲಿರುವ ಪ್ರತಿವಾದಿ ನಂ. 1 ಮತ್ತು 2 ರವರ ಸಹಿಗಳನ್ನು ಫೋರ್ಜರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 1 ರ ಕರಾರು ಕಾಲಾವಧಿ ಮುಗಿದು ಹೋದ ಕಾರಣ ಅದಕ್ಕೆ ಜೀವ ತುಂಬಲು ನಿಪಿ 2 ರ ಕರಾರನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2 ನೇ ಕರಾರು ರೂ.1,32,000/- ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರಂತೆ ರೂ.86,900/- ಮುಂಗಡ ಹಣಕೊಟ್ಟಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ರೂ. 1,12,000/- ಕೊಟ್ಟಿದ್ದು, ಬಾಕಿ ರೂ. 20 ಸಾವಿರ ರೂ ಕೊಡುವುದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಸೃಷ್ಟಿಸಿರುವ ಕರಾರು ಆಗಿದ್ದರಿಂದ ಪ್ರತಿವಾದಿಗಳು ಕ್ರಯಪತ್ರ ಬರೆದುಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಕರಾರು ಆಗುವಾಗ ನಾನು ಮತ್ತು ವಾದಿ ಸಾಕ್ಷಿ ನಂ. 3 ರವರು ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳುವಂತೆ ನಿಪಿ 2 ರ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ 2010 ರಲ್ಲಿ ಎಕರೆಗೆ ರೂ. 15 ಲಕ್ಷ ರೂಪಾಯಿ ಇತ್ತು ಎಂದರೆ ಇರಬಹುದು ನಾನು ನೋಡಿಲ್ಲ. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು.

ಈ ಹಂತದಲ್ಲಿ ಮುಂದವರೆದ ಪಾಟೀ ಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,ಆನೇಕಲ್.